**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ ಅಥಣಿ.**

ಅಸಲು ದಾವಾ ನಂ. **1133/2012** ದಿನಾಂಕಃ30.01.2023.

ಪಿ.ಡಬ್ಲೂಃ- **1**

**: ಸಾಕ್ಷಿಯನ್ನು ಕರೆಯಿಸಿ ಪ್ರಮಾಣಕರಿಸಲಾಯಿತು :**

**ಪಾಟೀ ಸವಾಲು:- 2 ಮತ್ತು 3 ನೇ ಪ್ರತಿವಾದಿ ಪರ ವಕೀರಾದ ಶ್ರೀ. ಸಿ ಬಿ ಪಿ ರವರಿಂದ.**

ಅಥಣಿ ಗ್ರಾಮದ ಸರ್ವೇ ನಂ. 5/2 ರಲ್ಲಿ ನಮ್ಮ ತಂದೆಯ ಭಾಗದ 2 ಎಕರೆ 17 ಗುಂಟೆ ಜಮೀನು ಇರುತ್ತದೆ. ನಿಪಿ1 ರ ಪ್ರಕಾರ ಪ್ರಲ್ಹಾದ ಕುಲರಕರ್ಣಿ ಅನಂತ ಕುಲಕರ್ಣಿ, ಅಜೀತ ಕುಲಕರ್ಣಿ ಮತ್ತು ಸುನಂದಾ ಜಾಗಿರದಾರವರಿಗೆ ಸೇರಿದ 10 ಗುಂಟೆ 08 ಆಣೆ ಜಮೀನು ಸರ್ವೇ ನಂ. 5/2 ರಲ್ಲಿ ಇರುತ್ತದೆ ಎಂದರೆ ಸರಿ. ನಿಪಿ1 ರಲ್ಲಿ 1 ಮತ್ತು 2 ನೇ ಪ್ರತಿವಾದಿಯರ ಹೆಸರಿಗೆ 2 ಎಕರೆ 17 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ನನ್ನ ಹೆಸರಿಗೆ 1 ಎಕರೆ ಜಮೀನು ಇರುತ್ತದೆ ಎಂದು ನಮೂದಿಸಲಾಗಿದೆ ಎಂದರೆ ಸರಿ. ಸದರಿ 1 ಎಕರೆ ಜಮೀನು ನನ್ನ ತಂದೆ ಮೃತ ಪಟ್ಟನಂತರ ನನ್ನ ಹೆಸರಿಗೆ ಆಗಿರುತ್ತದೆ. ನನ್ನ ತಂದೆಯಾಗಲಿ, ನನ್ನ ಅಜ್ಜನಾಗಲಿ ಮತ್ತು ನನ್ನ ಚಿಕ್ಕಪ್ಪಂದಿರಾಗಲಿ ಭೂ ನ್ಯಾಯ ಮಂಡಳಿಯ ಮುಂದೆ ಫಾರಂ ನಂ. 7 ರ ಅರ್ಜಿಯನ್ನ ಸಲ್ಲಿಸಿದ ಬಗ್ಗೆ ನ್ಯಾಯಾಲಯದ ಮುಂದೆ ದಾಖಲೆಗಳನ್ನು ಹಾಜರು ಪಡಿಸಿಲ್ಲ.

ನನ್ನ ಚಿಕ್ಕಪ್ಪ ಜ್ಯೋತಿ ಬಂಗಿರವರು ಆ ರೀತಿ ಅರ್ಜಿ ಸಲ್ಲಿಸಿದಿದ್ದರು ಸಹ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 858/2002 ರಲ್ಲಿ ಪ್ರಕರಣ ದಾಖಲಿಸಿದ್ದರು ಎಂದರೆ ಸರಿ. ನನ್ನ ಚಿಕ್ಕಪ್ಪ ಸದರಿ ಅರ್ಜಿಯನ್ನು ಮೆಮು ಸಲ್ಲಿಸಿ ಹಿಂಪಡಿದಿರುತ್ತಾನೆ ಎಂದರೆ ಸರಿ. ಅದಾದ ನಂತರ ಸದರಿ ವಿಚಾರಕ್ಕೆ ಸಂಬಂದಿಸಿ ಮೇಲ್ಮನವಿಯಾಗಲಿ ಅರ್ಜಿಗಳಾಗಲಿ ಯಾವುದೇ ನ್ಯಾಯಾಲಯದಲ್ಲಿ ಅಥವಾ ಭೂ ನ್ಯಾಯ ಮಂಡಳಿಯಲ್ಲಿ ಆಗಲಿ ಸಲ್ಲಿಸಿಲ್ಲ ಎಂದರೆ ಸರಿ.

1 ಮತ್ತು 2 ನೇ ಪ್ರತಿವಾದಿಯರು ಅರ್ಜಿ ಸಲ್ಲಿಸಿದ್ದರಿಂದ ಭೂ ನ್ಯಾಯ ಮಂಡಳಿಯವರು ಅವರ ಪರವಾಗಿ ಜಮೀನುಗಳನ್ನು ಮಂಜೂರು ಮಾಡಿದ್ದರು ಎಂದರೆ ಸರಿ . ನನ್ನ ಅಜ್ಜನಿಗೆ ವಯಸ್ಸಾಗಿತ್ತು ಮತ್ತು ಅವರಿಗೆ ಗೊತ್ತಾಗದ ಕಾರಣ ಅರ್ಜಿಯನ್ನು ಸಲ್ಲಿಸಿರುವುದಿಲ್ಲ . ನನ್ನ ಅಜ್ಜ ಸಿದ್ದಲಿಂಗಪ್ಪನ 5 ಜನ ಮಕ್ಕಳಾದ ಅಲ್ಲಪ್ಪ, ಸಿದ್ದಪ್ಪ, ಮಹದೇವ, ಮುರಗೇಪ್ಪ ಮತ್ತು ಜೋತೆಪ್ಪ ರವರು ಫಾರಂ ನಂ. 7 ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ . ದಾವಾ ಸ್ವತ್ತಿಗೆ ನಾನು ಮಾಲೀಕ ಎಂದು ತೋರಿಸಲು ದಾವೆಯೊಂದಿಗೆ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿ. ದಾವಾ ಮಾಡುವ ಕಾಲಕ್ಕೆ ನನ್ನ ಹೆಸರಿನಲ್ಲಿ 2 ಎಕರೆ 17 ಗುಂಟೆ ಜಮೀನು ಇರಲಿಲ್ಲ ಎಂದರೆ ಸರಿ. ನಮ್ಮ ಹಿರಿಯರಿಗೆ ಮತ್ತು 1 ಮತ್ತು 2 ನೇ ಪ್ರತಿವಾದಿಯರಿಗೆ ರಾಜೀ ಸಂದಾನ ಅಗಿತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿ . ಬಾಯಿ ತುಂಡಿನಲ್ಲಿ ಆಗಿತ್ತು ಎಂದು ನುಡಿಯುತ್ತಾರೆ.

1 ಎಕರೆ 5 ಗುಂಟೆ ಜಮೀನು ಮತ್ತು 9 ಗುಂಟೆ ಜಮೀನು ನನ್ನ ಕಬ್ಜಾದಲ್ಲಿ ಇರುತ್ತದೆ ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿಲ್ಲ. ದಾವೆಯಲ್ಲಿ ಸದರಿ 1 ಎಕರೆ 5 ಗುಂಟೆ ಮತ್ತು 9 ಗುಂಟೆ ಜಮೀನಿನ ಚಕ್ಕುಬಂದಿಯನ್ನು ನಮೂದಿಸಿಲ್ಲ ಎಂದರೆ ಸರಿ. ಸದರಿ ಜಮೀನಿದ ಪಹಣಿ ಪತ್ರಿಕೆಯಲ್ಲಿ 1 ಮತ್ತು 2 ನೇ ಪ್ರತಿವಾದಿಯರ ಹೆಸರು ದಾಖಲಾಗಿದೆ ಎಂದು ನನ್ನ ವಾದ ಪತ್ರದಲ್ಲಿ ಬರೆಸಿರುತ್ತೇನೆ ಎಂದರೆ ಸರಿ. ನನ್ನ ವಾದ ಪತ್ರದಲ್ಲಿ ಸದರಿ ಜಮೀನುಗಳಿಗೆ ಸಂಬಂಧಿಸಿ ಪ್ರತಿವಾದಿಯರು ನನಗೆ ಖರೀದಿ ಪತ್ರ ಬರೆದು ಕೊಡುತ್ತೇವೆ ಎಂದು ತಿಳಿಸಿದ್ದರು ಎಂದು ಬರೆಯಿಸಿರುತ್ತೇನೆ. 1 ಮತ್ತು 2 ನೇ ಪ್ರತಿವಾದಿಯರು ಆ ರೀತಿ ಖರೀದಿ ಪತ್ರವನ್ನು ಇಲ್ಲಿಯವರೆಗೂ ಬರೆದುಕೊಟ್ಟಿರುವುದಿಲ್ಲ. ಸದರಿ ಖರೀದಿ ಪತ್ರ ಬರೆದುಕೊಡಲು ಯಾವುದೇ ಹಣವನ್ನು ಕೊಡಬೇಡಿ ಎಂದು ನಮಗೆ ಹೇಳಿದ ಬಗ್ಗೆ ಮಾತುಕತೆ ಆಗಿತ್ತು . ಆ ಬಗ್ಗೆ ಯಾವುದೇ ಕರಾರು ಪತ್ರವನ್ನು ಬರೆದಿರುವುದಿಲ್ಲ.

ನಾನು ದಾವೆಯನ್ನು 03.08.2012 ರಂದು ಮಾಡಿರುತ್ತೇನೆ ಎಂದರೆ ಸರಿ. 1 ಮತ್ತು 3 ನೇ ಪ್ರತಿವಾದಿಯರು ದಿನಾಂಕಃ 05.08.2011 ರಂದೇ ಖರೀದಿ ಪತ್ರದ ಮೂಲಕ 3 ನೇ ಪ್ರತಿವಾದಿಗೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ ಸಾಕ್ಷಿ ಮುಂದೂವರೆದು ಅದು ಬೊಗಸ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಖರೀದಿ ಪತ್ರ ಬೋಗಸ ಇರುತ್ತದೆ ಮತ್ತು ಅದನ್ನು ರದ್ದು ಮಾಡಬೇಕೆಂದು ಈ ದಾವೆಯಲ್ಲಿ ಕೇಳಿಲ್ಲ ಎಂದರೆ ಸರಿ . 3 ನೇಪ್ರತಿವಾದಿ ಯಾವ ಚಕ್ಕುಬಂದಿಯ ಮದ್ಯದಲ್ಲಿನ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದು ವಾದ ಪತ್ರದಲ್ಲಿ ಬರೆದಿಲ್ಲ ಎಂದರೆ ಸರಿ. 1 ಎಕರೆ 5 ಗುಂಟೆ ಜಮೀನಿನ ಚಕ್ಕುಬಂದಿ ಬರೆಯಿಸಿಲ್ಲ ಎಂದರೆ ಸರಿ.

3 ನೇ ಪ್ರತಿವಾದಿ ಬರೆದುಕೊಟ್ಟಿರುವ ಖರೀದಿ ಪತ್ರದಲ್ಲಿ ದಾವಾ ಸ್ವತ್ತಿನ ಬೆಲೆ ರೂ . 4,74,000/- ಎಂದು ತೋರಿಸಲಾಗಿದೆ ಎಂದರೆ ಸರಿ. 4 ನೇ ಪ್ರತಿವಾದಿಯ ಹೆಸರಿನಲ್ಲಿ ಖರೀದಿ ಪತ್ರದ ಪ್ರಕಾರ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ. ಸದರಿ ಸ್ವತ್ತುನ್ನು 3 ನೇಪ್ರತಿವಾದಿಯು 1 ಮತ್ತು 2 ನೇ ಪ್ರತಿವಾದಿಯರಿಂದ ಖರೀದಿಸಿದ್ದ ಎಂದರೆ ಸರಿ. 3 ನೇ ಪ್ರತಿವಾದಿ ಸದರಿ ಸ್ವತ್ತಿನ ಕಬ್ಜಿಯಲ್ಲಿ ಖರೀದಿ ಪತ್ರ ಆದಾಗ ಇದ್ದರು ಎಂದರೆ ಸರಿಯಲ್ಲ . ಸಾಕ್ಷಿ ಮುಂದಾವರೆದು ನಾವು ಇದ್ದೇವು ಎಂದು ನುಡಿಯುತ್ತಾರೆ. ಈ ದಾವೆಯೊಂದಿಗೆ ನಮ್ಮ ಕಬ್ಜಿಗೆ ಹರಕತ್ತ ಮಾಡಬಾರದೆಂದು 4 ನೇ ಪ್ರತಿವಾಯರ ವಿರುದ್ಧ ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿ. ಸದರಿ 3 ನೇ ಪ್ರತಿವಾದಿಯ ಖರೀದಿ ಪತ್ರವನ್ನು ಹಾಜರು ಪಡಿಸಿರುತ್ತೇನೆ.

3 ನೇ ಪ್ರತಿವಾದಿಯು ದಿಃ 31.01.2014 ರಂದು 4 ನೇ ಪ್ರತಿವಾದಿಗೆ 14 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾನೆ ಎಂದರೆ ಸರಿ. ಆ ಪ್ರಕಾರ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ. ಸದರಿ ಖಾತೆ ಬದಲಾವಣೆ ಆದೇಶವು ರದ್ದಾಗಿಲ್ಲ ಎಂದರೆ ಸರಿ . 4 ನೇ ಪ್ರತಿವಾದಿಯು ತಾನು ಖರೀದಿಸಿದ 14 ಗುಂಟೆ ಜಮೀನಿನ ಪೈಕಿ 2 ಗುಂಟೆ ಜಮೀನನ್ನುದಿಃ 13.09.2017 ರಂದು 5 ಮತ್ತು 6 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ವ್ಯವಹಾರ ರೂ. 2,00,000/- ಗಳಿಗೆ ಆಗಿತ್ತು ಎಂದರೆ ಸರಿ. ಆ ಪ್ರಕಾರ 5 ಮತ್ತು 6 ನೇ ಪ್ರತಿವಾದಿಯರ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ. ಸದರಿ ಖರೀದಿ ಗಳೆಲ್ಲಾ ರದ್ದಾಗಲಿ ಎಂದು ದಾವೆಯಲ್ಲಿ ಕೋರಿರುವುದಿಲ್ಲ . ಖರೀದಿ ಪ್ರತದ ಪ್ರಕಾರ 3 ರಿಂದ 6 ನೇ ಪ್ರತಿವಾದಿಯರು ಮಾಲೀಕರು ಇರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದೂವರೆದು ಕಬ್ಜೆಯಲ್ಲಿ

ನಾವು ಇರುತ್ತೇವೆ ಎಂದು ನುಡಿಯುತ್ತಾರೆ. ನಾನೇ ಕಬ್ಜೆಯಲ್ಲಿ ಇರುತ್ತೇನೆ ಎಂದು ತೋರಿಸಲು ಕಾಗದ ಹಾಜರು ಪಡಿಸಿಲ್ಲ ಎಂದರೆ ಸರಿ.

ದಿಃ 14.03.2019 ರಂದು 4 ನೇ ಪ್ರತಿವಾದಿ ಮತ್ತು 5 ಮತ್ತು 6 ನೇ ಪ್ರತಿವಾದಿಯರು ಮದ್ಯ ವ್ಯವಹಾರ ಆಗಿರುತ್ತದೆ . ದಿಃ 13.09.2017 ರಂದು 3 ಮತ್ತು 4 ನೇ ಪ್ರತಿವಾದಿಯರ ಮದ್ಯೆದಲ್ಲಿ ವ್ಯವಹಾರ ಆಗಿರುತ್ತದೆ. ನನ್ನ ಹೆಚ್ಚುವರಿ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಬರೆಸಿರುವ ದಿನಾಂಕಗಳನ್ನು ಯಾವ ಕಾರಣಕ್ಕೆ ಬರೆಯಿಸಿರುತ್ತೇನೆ ಎಂದು ಹೇಳಲು ಆಗುವುದಿಲ್ಲ. ಖರೀದಿ ಪತ್ರದಲ್ಲಿ ಬರೆದುಕೊಟ್ಟವರೆಲ್ಲಾ ಬರೆಯಿಸಿಕೊಂಡವರಿಗೆ ಕಬ್ಜಾ ಕೊಟ್ಟಿರುತ್ತೇವೆ ಎಂದು ಬರೆಯಿಸಿರುತ್ತಾರೆ ಎಂದರೆ ಸರಿ. ನನ್ನ ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮಗೆ ಮತ್ತು ಪ್ರತಿವಾದಿಯರಿಗೆ ದಾವೆಗೂ ಮೊದಲು ಹಿರಿಯರು ರಾಜೀ ಸಂದಾನ ಮಾಡಿಸಿರುತ್ತಾರೆ ಎಂದು ಬರೆಯಿಸಿರುತ್ತೆನೆ ಎಂದರೆ ಸರಿ. ಆ ರೀತಿ ನಮ್ಮ ಜಮೀನಿನಲ್ಲಿಯೇ ಮಾತುಕತೆ ಆಗಿರುತ್ತದೆ.

ನನ್ನ ಹೆಸರಿಗೆ ಇರುವ 1 ಎಕರೆ ಜಮೀನು ನನ್ನ ತಂದೆ ಮತ್ತು ಚಿಕ್ಕಪ್ಪನ ಮದ್ಯದ ಪಾಲು ವಿಬಾಗದಲ್ಲಿ ನಮಗೆ ಬಂದ ಆಸ್ತಿ ಆಗಿರುತ್ತದೆ ಎಂದರೆ ಸರಿ. ಸದರಿ 1 ಎಕರೆ ಜಮೀನು ಪಾಲಿನಲ್ಲಿ ನಮಗೆ ಬಂದಿರುವುದರಿಂದ ಪ್ರತಿವಾದಿಯರಿಗೆ ಆ ಜಮೀನು ಸಂಬಂಧ ಪಟ್ಟಿಲ್ಲ ಎಂದರೆ ಸರಿ. ಸದರಿ 1 ಎಕರೆ ಜಮೀನನನ್ನು ಹೊರತು ಪಡಿಸಿ ಹೆಚ್ಚುವರಿಯಾಗಿ 1 ಎಕರೆ 5 ಗುಂಟೆ ಜಮೀನಿಗೆ ಸಂಬಂಧಿಸಿ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ 1 ಎಕರೆ 5 ಗುಂಟೆ ಜಮೀನು ನನ್ನ ಹೆಸರಿಗೆ ಅಥವಾ ನನ್ನ ಪೂರ್ವಜರ ಹೆಸರಿಗೆ ಇದ್ದ ದಾಖಲೆಗಳನು ಹಾಜರು ಪಡಿಸಿಲ್ಲ ಎಂದರೆ ಸರಿ. ಹಿರಿಯರ ಸಮಕ್ಷಮ ಆದ ಮಾತುಕತೆ ಪ್ರಕಾರ 1 ಎಕರೆ 5 ಗುಂಟೆ ಜಮೀನಿಗೆ ಸಂಬಂಧಿಸಿ ಈ ದಾವೆಯನ್ನು ಸಲ್ಲಿಸಿರುತ್ತೇನೆ. ಸದರಿ ಜಮೀನಿಗೆ ನಾನು ಮಾಲೀಕ ಎಂದು ತೋರಿಸಲು ನ್ಯಾಯಾಲಯದ ಮುಂದೆ ಯಾವುದೇ ಕಾಗದವನ್ನು ಹಾಜರು ಪಡಿಸಿಲ್ಲ ಎಂದರೆ ಸರಿ. ಮನಾಯಿ ಆದೇಶ ಪಡಿಯಲು ಸಹ ಕಬ್ಜೆಗೆ ಸಂಬಂಧಿಸಿ ದಾಖಲೆಗಳನ್ನು ಹಾಜರು ಪಡಿಸಬೇಕೆಂದರೆ ಸರಿ. ನಾನು ಮಾಲೀಕನಾಗಿದ್ದರೇ ಮಾತ್ರ ಪ್ರಾರ್ಥನೆಯಲ್ಲಿ ಕೇಳಿದಂತೆ ಪರಿಹಾರ ಕೇಳಲು ಬರುತ್ತದೆ ಎಂದರೆ ಸರಿ.

3 ನೇ ಪ್ರತಿವಾದಿ ನನ್ನ ಚಿಕ್ಕಪ್ಪನ ಮಗ ಎಂದರೆ ಸರಿ. ನಮಗೆ ಮತ್ತು ನನ್ನ ತಂದೆಯ ಅಣ್ಣ ತಮ್ಮಂದಿರ ಮದ್ಯ ನಮ್ಮ ಒಟ್ಟು ಕುಟುಂಬದ ಸ್ವತ್ತಿಗಗಳಿಗೆ ಪಾಲು ವಿಬಾಗ ಆಗಿರುತ್ತದೆ ಎಂದರೆ ಸರಿ. ಸದರಿ ಪಾಲು ವಿಬಾಗದ ನಂತರ ಖರೀದಿಸಿದ ಜಮೀನುಗಳು ಅವರ ಅವರ ಸ್ವಂತ ಜಮೀನುಗಳಾಗಿರುತ್ತದೆ ಎಂದರೆ ಸರಿ. ಪಾಲು ವಿಭಾಗದ ಪ್ರಕಾರ ನಮ್ಮ ಮಾಲ್ಕಿ ಜಮೀನು ನಮ್ಮ ಕಬ್ಜೆಯಲ್ಲಿ ಮತ್ತು ಉಳಿದ ಮಾಲಿಕ್ಕ ಜಮಿನು ಅವರ ಕಬ್ಜೆಯಲ್ಲಿ ಇರುತ್ತವೆ ಎಂದರೆ ಸರಿ . ಯಾವುದೇ ವ್ಯಾಜ್ಯ ಇರುವುದಿಲ್ಲ ಎಂದರೆ ಸರಿ ಸಾಕ್ಷಿ ಮುಂದೂವರೆದು ಈ ದಾವೆ ವ್ಯಾಜ್ಯ ಮಾತ್ರ ಇರುತ್ತದೆ ಎಂದು ನುಡಿಯುತ್ತಾರೆ.

2 ಎಕರೆ 17 ಗುಂಟೆ ಜಮೀನು 1 ಮತ್ತು 2 ನೇ ಪ್ರತಿವಾದಿಯರಿಗೆ ಭೂ ನ್ಯಾಯ ಮಂಡಳಿಯ ಆದೇಶದ ಪ್ರಕಾರ ಮಂಜೂರು ಆಗಿರಿರುತ್ತದೆ ಎಂದರೆ ಸರಿ. ಸದರಿ ಆದೇಶದ ಪ್ರಕಾರ 1 ಮತ್ತು 2 ನೇ ಪ್ರತಿವಾದಿಯರ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ. ಸದರಿ ಭೂ ನ್ಯಾಯ ಮಂಡಳಿಯ ಆದೇಶದ ವಿರುದ್ದ ಮೇಲನ್ಮವಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತು ಸದರಿ 2 ಎಕರೆ 17 ಗುಂಟೆ ಜಮೀನಿನ ಕ್ಷೇತ್ರದಲ್ಲಿಯೇ ಇರುತತದೆ ಎಂದರೆ

ರಿ. ಅದರ ಮೇಲೆ ನಾನು ಮಾಲ್ಕೀ ಹಕ್ಕನ್ನು ಕೇಳಿರುತ್ತೇನೆ ಎಂದರೆ ಸರಿ. ಸದರಿ 2 ಎಕರೆ 17 ಗುಂಟೆ ಜಮೀನಿನಲ್ಲಿ 9 ಗುಂಟೆ ನನಗೆ ಕೊಡಿ ಎಂದು ಕೇಳುತ್ತಿದ್ದೇನೆ ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಯರು ನನ್ನ ಪರವಾಗಿ ಕರಾರು ಪತ್ರ ಮತ್ತು ಖರೀದಿ ಪತ್ರಗಳನ್ನು ಬರೆದುಕೊಟ್ಟಿಲ್ಲ ಎಂದರೆ ಸರಿ. ಸದರಿಯವರಿಗೆ ಹೆದರಿಸುವ ಉದ್ದೇಶದಿಂದ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿಯವರಿಗೆ ತೊಂದರೆ ನೀಡಿದರೆ ಸದರಿಯವರು ನನಗೆ ಜಮೀನು ಕೊಡಬಹುದು ಎಂಬ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವೆ ಹಾಕಿದಾಗ 2 ಎಕರೆ 17 ಗುಂಟೆ ಜಮೀನಿನ ಪೈಕಿ ಮದ್ಯ ಭಾಗದ 1 ಎಕರೆ 5 ಗುಂಟೆ ಆಗಲೀ ಅಥವಾ 9 ಗುಂಟೆ ಆಗಲಿ ನಾನು ಮಾಲೀಕ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿ . 2 ಎಕರೆ 17 ಗುಂಟೆ ಜಮೀನನ್ನು ಹೊರತು ಪಡಿಸಿ ನಿಪಿ 1 ರಲ್ಲಿರುವ ನನ್ನ 1 ಎಕರೆ ಜಮೀನಿಗೆ ಸಂಬಂಧಿಸಿ ಈ ದಾವೆಯನ್ನು ಹೂಡಿಲ್ಲ ಎಂದರೆ ಸರಿಯಲ್ಲ. ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5 ಮತ್ತು 6 ನೇ ಪ್ರತಿವಾದಿಯರು ಪಾಟೀ ಸವಾಲಿಗೆ ಸಮಯಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

(ಪ್ರಶಾಂತ ನಾಗಲಾಪೂರ)
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ.ನ್ಯಾಯಾಲಯ, ಅಥಣಿ